# ಕರ್ನಾಟಕ ಸರ್ಕಾರ

ವಿಷಯ:- ಬಾಗಲಕೋಟೆ ಜಿಲ್ಲೆ, ಮುಧೋಳ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಲಾಗಿರುವ ಸಮಗ್ರಾಭಿವೃದ್ಧಿ ಯೋಜನೆಗೆ ಅಂತಿಮ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:- 1. ಸರ್ಕಾರದ ಆದೇಶ ಸಂ. ನಅಇ 74 ಬಿಬಿಪಿ 98 ದಿ:27-4-98.
2. ಸದಸ್ಯ-ಕಾರ್ಯದರ್ಶಿಗಳು ಮುಖ್ಯಾಧಿಕಾರಿಗಳು ನಗರ ಯೋಜನಾ ಪ್ರಾಧಿಕಾರ, ಪುರಸಭೆ, ಮುಧೋಳ ಇವರ ಪತ್ರ ಸಂ. ನಯೋ. ಸನಿ. ಜಕಿ. ಸಮಗ್ರಯೋ. 736/99-2000 ದಿನಾಂಕ:24-3-2000.
3. ನಯೋ. ಉನಿ ಕೇ. ಸಮಗ್ರಯೋ. ಮುಧೋಳ. 2001-02, ದಿನಾಂಕ:20-11-2001.

---

**ಪ್ರಸ್ತಾವನೆ:**

ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ಮುಧೋಳ ಪಟ್ಟಣದ ಸಮಗ್ರಾಭಿವೃದ್ಧಿ ಯೋಜನೆಗೆ ತಾತ್ಕಾಲಿಕ ಅನುಮೋದನೆ ನೀಡಿರುತ್ತದೆ. ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ಮುಖ್ಯಾಧಿಕಾರಿಗಳು, ಯೋಜನಾ ಪ್ರಾಧಿಕಾರ, ಪುರಸಭೆ, ಮುಧೋಳ ಇವರು ಮುಧೋಳ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸಮಗ್ರಾಭಿವೃದ್ಧಿ ಯೋಜನೆಯನ್ನು ತಯಾರಿಸಿ ಸರ್ಕಾರದ ಅನುಮೋದನೆಯನ್ನು ಕೋರಿರುತ್ತಾರೆ. ಮೇಲೆ (3) ರಲ್ಲಿ ಓದಲಾದ ಪತ್ರದಲ್ಲಿ ಮುಧೋಳ ಪಟ್ಟಣದ ಸಮಗ್ರಾಭಿವೃದ್ಧಿ ಯೋಜನೆಯನ್ನು 2011ನೇ ಇಸವಿಗೆ ಅಂದಾಜಿಸಲಾಗಿ 72,000 ಜನಸಂಖ್ಯೆಗೆ ತಯಾರಿಸಿದ್ದು, ಯೋಜನೆಯ ಅಭಿವೃದ್ಧಿಗಾಗಿ ಒಟ್ಟು 520.90 ಹೆಕ್ಟೇರ ಭೂಮಿ ಬೇಕಾಗಬಹುದೆಂದು ಅಂದಾಜು ಮಾಡಿದ್ದು ಈ ಪೈಕಿ 284.50 ಹೆಕ್ಟೇರ ಪ್ರದೇಶವನ್ನು ವಸತಿಗಾಗಿ ಶೇಕಡ 48.22, 39.00 ಹೆಕ್ಟೇರ ವಾಣಿಜ್ಯಕ್ಕಾಗಿ ಶೇಕಡಾ 6.66 ಹಾಗೂ 39.56 ಹೆಕ್ಟೇರ ಪ್ರದೇಶ ಕೈಗಾರಿಕೆಗಾಗಿ ಶೇಕಡ 6.70 ಕಾಯ್ದಿರಿಸಲಾಗಿದೆ. ಹಾಗೂ ಇನ್ನಿತರ ನಾಗರೀಕ ಸೌಲಭ್ಯಗಳಿಗೆ ಬಯಲು ಜಾಗ :ಉದ್ಯಾನವನಗಳಿಗೆ ಅಗತ್ಯ ಪ್ರದೇಶಗಳನ್ನು ನಿಗದಿಗೊಳಿಸಲಾಗಿದೆ ಎಂತಲೂ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಅಗತ್ಯವಾದ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದೆ ಎಂತಲೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 12 ರಲ್ಲಿ ನಿರೂಪಿಸಿರುವ ಅಂಶಗಳಿಗೆ ಅನುಗುಣವಾಗಿ ಯೋಜನೆ ತಯಾರಿಸಿದ್ದು ಕೆ.ಟಿ.ಸಿ.ಪಿ. ಕಾಯ್ದೆ 1961 ರ ಕಲಂ 13(3) ರನ್ವಯ ಮುಧೋಳ ಪಟ್ಟಣದ ಸಮಗ್ರಾಭಿವೃದ್ಧಿ ಯೋಜನೆಗೆ ಅಂತಿಮ ಅನುಮೋದನೆ ಕೋರಿ ನಗರ ಯೋಜನಾ ನಿರ್ದೇಶಕರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿದ್ದು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

ಸರ್ಕಾರಿ ಆದೇಶದ ಸಂಖ್ಯೆ. ನಅಇ 377 ಬೆಮಪ್ರಾ 200 ಬೆಂಗಳೂರು ದಿನಾಂಕ: 27-3-2002

ಬಾಗಲಕೋಟೆ ಜಿಲ್ಲೆ ಮುಧೋಳ ಪಟ್ಟಣದ ಸಮಗ್ರಾಭಿವೃದ್ಧಿ ಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13(3) ರನ್ವಯ ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅಂತಿಮ ಅನುಮೋದನೆ ನೀಡಿದೆ.

"ಸಮಗ್ರಾಭಿವೃದ್ಧಿ ಯೋಜನೆಯ ವರದಿಯಲ್ಲಿನ ಪುಟ ಸಂ.55 ರಲ್ಲಿ ಉಪ ವಿಭಜನೆ ನಿಯಮಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ತಯಾರಿಸಲಾದ ವಲಯ ನಿಯಮಾವಳಿಗಳನ್ನು ಅಳವಡಿಸಲಾಗಿದ್ದು, ಈ ಉಪ ವಿಭಜನೆ ನಿಯಮಗಳನ್ನು, ಯೋಜನೆಯನ್ನು ಕಾರ್ಯಾನುಷ್ಠಾನಕ್ಕೆ ತರುವ ಹಂತದಲ್ಲಿ ಪಾಲಿಸತಕ್ಕದ್ದು."

ಸೂಧಲಾಭಿವೃದ್ಧಿ ಯೋಜನೆಗೆ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕಾಶೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಅಹಮದ್ ಎ. ಮುಖ್ತದರ್)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಇವರಿಗೆ:-

1) ನಗರ ಯೋಜನಾ ನಿರ್ದೇಶಕರು ಬೆಂಗಳೂರು(ಸೂಧಲಾಭಿವೃದ್ಧಿ ಯೋಜನೆ ನಕ್ಷೆಗಳು ಮತ್ತು ವರದಿಯೊಂದಿಗೆ )
2) ಮುಖ್ಯಾಧಿಕಾರಿಗಳು ನಗರ ಯೋಜನಾ ಪ್ರಾಧಿಕಾರ, ಪುರಸಭೆ, ಮುಧೋಳ (ಸೂಧಲಾಭಿವೃದ್ಧಿ ಯೋಜನೆ ನಕ್ಷೆಗಳು ಮತ್ತು ವರದಿಯೊಂದಿಗೆ)
3) ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ ಬೆಂಗಳೂರು
4) [illegible] ಗೆಜೆಟ್ : ರಕ್ಷಾ ಕಡತ : ಬಿಡಿಪ್ರತಿ.

ಜಿ